**ಓ. ಎಸ್.13 /2015**
**ಡಿಡಬ್ಲೂಃ2**

**( ಇಂದು ದಿಃ 19-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಭೋಧಿಸಲಾಯಿತು)**

**<u>ಪಾಟೀ ಸವಾಲುಃ ಶ್ರೀಮತಿ ಎಂ ವಿ ಎಲ್ ವಕೀಲರಿಂದ</u>**

ಸರ್ವೇ ನಂಬರ್ 4 ರಲ್ಲಿ ನನಗೆ 2 ಎಕರೆ 26 ಗುಂಟೆ ಜಮೀನು ಇದೆ. ಪಹಣಿ ಪತ್ರಿಕೆಯಲ್ಲಿ ಸರ್ವೇ ನಂಬರ್ 4 ಕ್ಕೆ 19 ಗುಂಟೆ ಜಮೀನನ್ನು ಪೊಟ ಕರಾಬ ( ಬಿ) ಎಂದು ತೋರಿಸಲಾಗಿದೆ ಅಂದರೆ ಸರಿ. ನನಗೆ ಕೇವಲ 2 ಗುಂಟೆ 17 ಗುಂಟೆ ಮಾತ್ರ ಸಾಗುವಳಿ ಜಮೀನು ಉಳಿಯುತ್ತದೆ ಅಂದರೆ ಸರಿ. ಅದೇ ರೀತಿ 1 ನೇ ಪ್ರತಿವಾದಿಗೂ ಕೂಡಾ 2 ಎಕರೆ 17 ಗುಂಟೆ ಮಾತ್ರ ಸಾಗುವಳಿ ಜಮೀನು ಉಳಿಯುತ್ತದೆ ಅಂದರೆ ಸರಿ. ಸರ್ವೇ ನಂಬರ್ 5 ರಲ್ಲಿ ಕೂಡಾ ಪೋಟ ಕರಾಬ (ಬಿ) ಅಡಿಯಲ್ಲಿ 18 ಗುಂಟೆ ತೋರಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ್ 48/ಅ ರ 8 ಎಕರೆ 6 ಗುಂಟೆ ಜಮೀನಿನಲ್ಲಿ 13 ಗುಂಟೆ ಜಮೀನನ್ನು ಪೋಟ ಕರಾಬ (ಎ) ಎಂದು ಇದೆ ಎಂದು ತೋರಿಸಿದ್ದಾರೆ ಅಂದರೆ ಸರಿ. ಸಾಗುವಳಿ ಯೋಗ್ಯ ಜಮೀನು ಕೇವಲ 7 ಎಕರೆ 33 ಗುಂಟೆ ಅಂದರೇ ಸರಿ. ಸದರಿ 7 ಎಕರೆ 33 ಗುಂಟೆ ಜಮೀನು 3 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಅಂದರೆ ಸರಿ. ಸರ್ವೇ ವನಂಬರ್ 48/ಆ ದಲ್ಲಿ ಒಟ್ಟು 27 ಗುಂಟೆ ಜಮೀನು ಇದೆ ಅಂದರೆ ಸರಿ. ಅದರಲ್ಲಿ ನನಗೆ ಕೇವಲ 14 ಗುಂಟೆ ಸಾಗುವಳಿ ಜಮೀನು ಇದೆಅಂದರೆ ಸರಿ.

ಸರ್ವೇ ನಂಬರ್ 4 ರ ಪಶ್ಚಿಮಕ್ಕೆ ಕೊಂಚೂರದಿಂದ ಹಲಕಟ್ಟಾ ಹೋಗುವ ರಸ್ತೆ ಇದೆ ಅಂದರೆ ಸಾಕ್ಷಿಯು ಬಂಡಿ ದಾರಿ ಇದೆ ಎಂದು ಹೇಳುತ್ತಾರೆ. ಸರ್ವೇ ನಂಬರ್ 4, 5 ಮತ್ತು 48 ರ ಪೂರ್ವಕ್ಕೆ ಸರ್ವೇ ನಂಬರ್ 37 ಅಂದರೆ ವಾದಿಗೆ ಸೇರಿದ ಜಮೀನು ಹತ್ತಿಕೊಂಡಿದೆ ಅಂದರೆ ಸರಿ. ನಾವು ನಮ್ಮ ಜಮೀನಿಗೆ ಕೊಂಚೂರ-ಹಲಕಟ್ಟಾ ಬಂಡಿ ದಾರಿಯ ಮೂಲಕ ಬರುತ್ತೇವೆ ಅಂದರೆ ಸರಿ. ನಮ್ಮ ಜಮೀನಿಗೆ ಹೋಗಲು ಸರ್ವೇ

ನಂಬರ್ 5 ಮತ್ತು 6 ರ ನಡುವೆ ಇರುವ ಬಂಡಿ ದಾರಿಯ ಮೂಲಕ ಕೂಡಾ ಬರಹುದು. ಸರ್ವೇ ನಂಬರ್ 5 ಮತ್ತು 6 ನಡುವೆ ಬಂಡಿ ದಾರಿ ಇದೆ ಎಂದು ತೋರಿಸಲು ನಾವು ದಾಖಲೆಗಳನ್ನು ಕೊಟ್ಟಿದ್ದೇವೆ. ಸರ್ವೇ ನಂಬರ್ 5 ಮತ್ತು 6 ನಡುವೆ ಯಾವುದೇ ನಾಲಾ ಅಥವಾ ಹಳ್ಳ ಇಲ್ಲ. ಸರ್ವೇ ನಂಬರ್ 5 ಮತುತ 6 ರ ನಡುವೆ ನಮ್ಮ ಜಮೀನಿಗೆ ಹೋಗಲು ಬಂಡಿ ದಾರಿ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸರ್ವೇ ನಂಬರ್ 4 ನ್ನು ನನ್ನ ತಂದೆ ಖರೀದಿ ಮಾಡಿದ್ದಾರೆ. ಸರ್ವೇ ನಂಬರ್ 48 ಕೂಡಾ ನನ್ನ ತಂದೆ ಖರೀದಿ ಮಾಡಿದ ಜಮೀನು ಇರುತ್ತದೆ. ಯಾರ ಕಡೆಯಿಂದ ಖರೀದಿ ಮಾಡಿದ್ದಾರೆ ನನಗೆ ಗೊತ್ತಿಲ್ಲ. ನಾನು ಖರೀದಿ ಪತ್ರಗಳನ್ನು ನೋಡಿಲ್ಲ. ಕೊಂಚೂರ-ಹಲಕಟ್ಟಾ ಬಂಡಿ ದಾರಿ ಮತ್ತು ವಾದಿಯ ಜಮೀನಿನ ನಡುವೆ ಸರ್ವೇ ನಂಬರ್ 4, 5 ಮತ್ತು 48 ಬರುತ್ತವೆ ಅಂದರೆ ಸರಿಯಲ್ಲ. ಸರ್ವೇ ನಂಬರ್ 48, 4 ಮತ್ತು 5 ಇವುಗಳ ನಡುವೆ ಇರುವ ಒಡ್ಡಿನ ಮೂಲಕವೇ ಹೊಗಬೇಕಾಗುತ್ತದೆ ಅಂದರೆ ಸರಿಯಲ್ಲ. ಸರ್ವೇ ನಂಬರ್ 48 ಮತ್ತು 4 ಗಳು ಕೂಡುವ ಅಂಚಿನಲ್ಲಿ 1 ನಚ ಪ್ರತಿವಾದಿ 1 ಕೋಣೆಯನ್ನು ನಿರ್ಮಿಸಿಕೊಂಡಿದ್ದಾರೆ ಅಂದರೆ ಸರಿ. ಒಡ್ಡಿನ ಮೇಲೆ ವಾದಿ ಅಡ್ಡಾಡುವುದನ್ನು ತಪ್ಪಿಸಲು ಸದರಿ ಕೋಣೆಯನ್ನು ಕಟ್ಟಾಲಾಗಿದೆ ಅಂದರೆ ಸರಿಯಲ್ಲ. ಸರ್ವೇ ನಂಬರ್ 48 ಮತ್ತು ಸರ್ವೇ ನಂಬರ್ 4 ಮತ್ತು 5 ಇವುಗಳ ಮಧ್ಯೆ ಇರುವ ಒಡ್ಡಿನ ಮೂಲಕವೇ ವಾದಿ ಮತ್ತು ಅವರ ಮನೆತನದವರು 100 ವರ್ಷಗಳಿಗಿಂತಲೂ ಪೂರ್ವದಿಂದ ಉಪಯೋಗಿಸಿಕೊಂಡು ಬಂದಿದ್ದಾರೆ ಅಂದರೆ ಸರಿಯಲ್ಲ. ಕೋಣೆ ಕಟ್ಟಿ ದಾರಿ ಬಂದು ಮಾಡಿರುವುದ್ದರಿಂದ ವಾದಿಗೆ ತನ್ನ ಜಮೀನಿಗೆ ಹೋಗಲು ತೊಂದರೆಯಾಗುತ್ತಿದೆ ಅಂದರೆ ಸರಿಯಲ್ಲ. ಅವರಿಗೆ ದಾರಿ ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

**ಓ. ಹೇ. ಕೆ. ಸರಿ. ಇದ.**

**-Sd-**
**ಸಿವಿಲ್ ನ್ಯಾಯಾಧೀಶರು,**
**ಶಹಬಾದ.**